(SRI A. R. BADARINARAYANA)

2. In the High School under the same Management, there are 12 Scheduled Castes/Scheduled Tribes pupils on roll. Even from these Scheduled Castes/Scheduled Tribes Candidates at the time of admission, this management is reported to be collecting donation of Rs. 25 and a monthly donation of Rs. 4. Here again authorised fees like admission, sports and R. R., Visual Education, etc., are not being collected by them. These two schools as well as other schools run by this management going under the name of Nandanavana Group of Schools, in recent times, are reported to have committed irregularities particularly with regard to the collection of unauthorised fees in the form of "Donations.

3. A detailed investigation was taken up by the Joint Director of Public Instruction (Administration) as Vigilance Officer against this Management. The case against them is still going on and a Show Cause Notice has been issued to the Management as to why action should not be taken against them as per relevant provisions of the Grant-in-aid Code. This case is still under the active investigation of the department. The Department after finalising the enquiry has two remedies open before it, *i.e.*, either to reduce the grant or to total stoppage of it or withdrawal of recognition. In case, the latter course of action is taken recourse to it would be giving rise to a situation, as has arisen in some other institutions of the teachers being retrenched.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ವಿದ್ಯಾಮಂತ್ರಿಗಳು ಕೊಟ್ಟಂತಹ ಉತ್ತರವನ್ನು ನೋಡಿ ಬಹಳ ಸಂತೋಷವಾಯಿತು. ಅದಕ್ಕಾಗಿ ಅವರು ಅಭಿನಂದನಾರ್ಹರು. ಆದರೆ ಇದೇ ರೀತಿ ನಮ್ಮ ರಾಜ್ಯದಲ್ಲಿರತಕ್ಕ ಖಾಸಗೀ ಶಾಲೆಗಳು, ಖಾಸಗೀ ಏಡೆಡ್ ಶಾಲೆಗಳು, ಖಾಸಗೀ ಕಾಲೇಜುಗಳು, ಖಾಸಗೀ ಏಡೆಡ್ ಕಾಲೇಜುಗಳು ಮತ್ತು ಖಾಸಗೀ ಏಡೆಡ್ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಒಂದಲ್ಲ ಒಂದು ರೂಪದಲ್ಲಿ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಂದ ಫೀಯನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಈಗ ಸರ್ಕಾರದವರು ಏಕ ನದನ್ಯ ಆಯೋಗವನ್ನು ಏನು ನೇಮಕ ಮಾಡಿದ್ದಾರೆ, ಅವರಿಂದ ಯಾವ ಯಾವ ಖಾಸಗೀ ಶಿಕ್ಷಣ ಸಂಸ್ಥೆಗಳು ಫೀಯನ್ನು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಂದ ವಸೂಲಿ ಮಾಡುತ್ತಿವೆ ಎಂಬುದನ್ನು ಪರಿಶೀಲನೆಮಾಡಿಸುತ್ತೀರಾ ?

† ಶ್ರೀ ಎ. ಆರ್. ಬದರೀನಾರಾಯಣ್.—ಏಡೆಡ್ ಇನ್ಸ್‌ಟಿಟ್ಯೂಷನ್‌ಗಳಲ್ಲಿ ಏನಾದರು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಂದ ಫೀಯನ್ನು ವಸೂಲಿ ಮಾಡಿದ್ದು ಕಂಡುಬಂದರೆ ಅಂತಹ ಇನ್ಸ್‌ಟಿಟ್ಯೂಷನ್‌ಗಳ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಆ ರೀತಿ ತಾವು ಇನ್‌ಸ್ಪಿಟ್ಯೂಷನ್‌ಗಳಿಗೆ ರೆಕಗ್ನಿಷನ್ ಕೊಡತಕ್ಕಂಥಾ ಬಗ್ಗೆ ಕಡ್ಡಾಯವಾಗಿ ಷರತ್ತನ್ನು ಹಾಕಿ ಪರಿಶಿಷ್ಟವರ್ಗದವರಿಗೆ ಮತ್ತು ಪರಿಶಿಷ್ಟ ಜನಾಂಗದವರಿಗೆ ಸರ್ಕಾರದ ಹುಕುಂ ಪ್ರಕಾರ ಯಾವುದೇ ಫೀಜನ್ನು ತಗೆದುಕೊಳ್ಳಬಾರದು, ಅವಕ್ಕೆ ಒಪ್ಪುವುದಾದರೆ ಮಾತ್ರ ರೆಕಗ್ನಿಷನ್ ಕೊಡುತ್ತೇವೆ, ಗ್ಯಾರಂಟ್ ಕೊಡುತ್ತೇವೆ ಎಂದು ಹೇಳಿ ಒಂದು ಸರ್ಕಾರದ ನೀತಿಯನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎ. ಆರ್. ಬದರೀನಾರಾಯಣ್.—ಇದು ಎಲ್ಲರಿಗೂ ಗೊತ್ತಿರುವ ವಿಷಯ. ಅದನ್ನು ಸ್ಪೆಸಿಫಿಕ್ ಆಗಿ ಮೆನ್‌ಷನ್ ಮಾಡಬೇಕು ಎಂದರೆ ಮಾಡಬಹುದು.

Notice of adjournment Motion *re.* Hunger Strike of some teachers

ಶ್ರೀ ವಾಟಾಳ್‌ನಾಗರಾಜ್ (ಚಾಮರಾಜಪೇಟೆ).—ಖಾಸಗೀ ಶಾಲೆಗಳ ಬಗ್ಗೆ ಮತ್ತು ಆ ಶಾಲಾ ಉಪಾಧ್ಯಾಯರ ಬಗ್ಗೆ ನಾನು ತಮಗೆ ಒಂದು ನೋಟೀಸ್ ಕಳುಹಿಸಿಕೊಟ್ಟಿದ್ದೇನೆ. ಅದರ

ಬಗ್ಗೆ ಚರ್ಚೆ ನಡೆಸುವುದಕ್ಕೆ ಅವಕಾಶವನ್ನು ಕೊಡಬೇಕು. ಕೆಲವು ಉಪಾಧ್ಯಾಯರು ಟೆಂಟ್ ಹಾಕಿ ಕೊಂಡು ಕುಳಿತುಕೊಂಡಿದ್ದಾರೆ. ಅದರಲ್ಲಿ ಕೆಲವು ಉಪಾಧ್ಯಾಯನಿಯರು ಇದ್ದಾರೆ. ಅವರು ಬಹಳ ತೊಂದರೆಪಡುತ್ತಿದ್ದಾರೆ. ಆದ್ದರಿಂದ ಈ ಬಗ್ಗೆ ಮಾನ್ಯ ವಿದ್ಯಾನಚಿವರು ಏನಾದರೂ ಹೇಳಬೇಕು.

ಅಧ್ಯಕ್ಷರು.—ಅದನ್ನು ಆಮೇಲೆ ನೋಡೋಣ. ದಯವಿಟ್ಟು ಮಾನ್ಯನದಸ್ಯರು ಕುಳಿತು ಕೊಳ್ಳಬೇಕು.

ಶ್ರೀ ಕೆ. ಪ್ರಭಾಕರ್.—ಕಾರ್ ಅರ್ಜೆಪ್ಟ್ ನೋಟೀಸ್ ಬಗ್ಗೆ ನಾನು ಒಂದು ಕ್ಲಾರಿಫಿಕೇಷನ್ ಕೇಳಬೇಕು.

ಅಧ್ಯಕ್ಷರು.—ಆ ವಿಚಾರ ಮುಗಿದು ನಾನು ಈಗಾಗಲೇ ಬೇರೆ ವಿಷಯಕ್ಕೆ ಹೋಗಿದ್ದೇನೆ.

ಶ್ರೀ ಕೆ. ಪ್ರಭಾಕರ್.—ಇಲ್ಲ ನಾನು ಒಂದು ಕ್ಲಾರಿಫಿಕೇಷನ್ ಕೇಳಬೇಕು.

ಅಧ್ಯಕ್ಷರು.—ಹಿಂದಿನ ವಿಷಯ ಮುಗಿದು ಬೇರೆ ವಿಷಯಕ್ಕೆ ಹೋಗಿದ್ದೇನೆ ಎಂದು ಹೇಳಿದರೂ ಕೂಡ ಮತ್ತೆ ನಾನು ಪ್ರಶ್ನೆಯನ್ನು ಕೇಳುತ್ತೇನೆ ಎಂದರೆ ಹೇಗೆ? ಈ ವಿಚಾರದಲ್ಲಿ ಮಾನ್ಯ ಶ್ರೀ ಮಲ್ಲಪ್ಪನವರು ಸ್ವಲ್ಪ ಹೇಳಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಸ್ಪೀಮಿ ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಈ ನಭೆಯು ಕಾರ್ಯಕರಾಪಗಳನ್ನು ನಡೆಸುವ ಬಗ್ಗೆ ಮಾನ್ಯ ಅಧ್ಯಕ್ಷರು ಶ್ರೀಮಾನ್ ಮಲ್ಲಪ್ಪನವರ ಸಲಹೆಯನ್ನು ಕೇಳುವುದು ಎಂದರೆ ಅರ್ಥವೇನು ?

ಅಧ್ಯಕ್ಷರು.—ಶ್ರೀಮಾನ್ ಮಲ್ಲಪ್ಪನವರು ಪಾರ್ಟಿ ವಿಪ್. ಆದ್ದರಿಂದ ಅವರ ಪಾರ್ಟಿ ಯವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುವ ಬಗ್ಗೆ ಅವರು ಹೇಳಬೇಕು. ಇದು ಪಾರ್ಲಮೆಂಟರಿ ಪ್ರೊಸೀಜರ್. ಮಾನ್ಯ ಸದಸ್ಯರಾದ ಶ್ರೀಮಾನ್ ಲಿಂಗಪ್ಪನವರು ಇನ್ನೂ ಹೊಸಬರು ತಮಗೆ ವಿಷಯ ಇನ್ನೂ ಗೊತ್ತಿಲ್ಲ. ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ವಾಟಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ನಾನು ಒಂದು ವಿಷಯ ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ. ಖಾನಗೀ ಶಾಲಾ ಉಪಾಧ್ಯಾಯರು ಅಮರಣಾಂತರ ಉಪವಾನ ಕುಳಿತು ಕೊಂಡಿದ್ದಾರೆ. ಆದ್ದರಿಂದ ಈ ಬಗ್ಗೆ ಮಾನ್ಯ ವಿದ್ಯಾ ನಚಿವರಾಗಲೀ, ಅಥವಾ ಮಾನ್ಯ ಮುಖ್ಯ ಮಂತ್ರಿಗಳಾಗಲೀ, ಅವರ ಬೇಡಿಕೆಯ ಬಗ್ಗೆ ತೀರ್ಮಾನ ಮಾಡಬಹುದಾಗಿತ್ತು. ಅವರು ಯಾವುದನ್ನೂ ಮಾಡದೆ ಸುಮ್ಮನೆ ಕುಳಿತುಕೊಂಡಿದ್ದಾರೆ. ಆದ್ದರಿಂದ ಅವರು ಈ ಬಗ್ಗೆ ಸ್ಪಷ್ಟವಾಗಿ ನಿರ್ದಿಷ್ಟವಾಗಿ ಒಂದು ಹೇಳಿಕೆಯನ್ನು ನೀಡಬೇಕಾಗಿದೆ. ಅಲ್ಲಿ ಉಪಾಧ್ಯಾಯರು ಹೆಂಗನರು ಕುಳಿತುಕೊಂಡಿರುವುದನ್ನು ನೋಡಿದರೆ ಬಹಳ ಸಂಕಟವಾಗುತ್ತದೆ. ಈ ಬಗ್ಗೆ ಮಾನ್ಯ ಅಧ್ಯಕ್ಷರಿಗೂ ಬಹಳ ಸಂಕಟವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ವಿಷಯ ತೀರ್ಮಾನವಾಗದಿದ್ದರೆ ಉಲ್ಬಣವಾದ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಅಥವಾ ವಿದ್ಯಾನಚಿವರು ಸ್ಪಷ್ಟವಾಗಿ ಒಂದು ದೀರ್ಘವಾದ ಉತ್ತರವನ್ನು ಕೊಡಬೇಕು ಎಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಈ ವಿಷಯವನ್ನು ತಾವೇನಾದರೂ ಬರೆದುಕೊಟ್ಟಿದ್ದೀರಾ, ಇದು ಅಷ್ಟು ಸುಲಭ ವಾಗಿ ಬಗೆಹರಿಯುತ್ತದೆಯೇ ? ಮುಂಚಿತವಾಗಿ ನೋಟೀಸ್ ಕೊಡದೇ ಹೇಗೆ ಮಾತನಾಡಿದರೆ ಹೇಗೇ ?

ಶ್ರೀ ಎಂ. ಎಸ್. ಕೃಷ್ಣನ್.—ಇದು ಬಹಳ ಮುಖ್ಯವಾದ ವಿಷಯ. ಇವರ ಬಗ್ಗೆ ನರ್ಕಾರದ ಜವಾಬ್ದಾರಿ ಇದೆ. ಈಗ ಉಪವಾನ ಕುಳಿತುಕೊಂಡಿರತಕ್ಕ ಉಪಾಧ್ಯಾಯರು ಡಿ.ಪಿ.ಐ. ಅವರನ್ನು ನೋಡುವುದಕ್ಕೆ ಹೋದಾಗ ಅವರು ಈ ಉಪಾಧ್ಯಾಯರನ್ನು ಗೆಟ್ ಔಟ್ ಎಂದು ಹೇಳಿದ್ದಾರೆ. ಈ ಉಪಾಧ್ಯಾಯರ ಬೇಡಿಕೆಯ ವಿಷಯದಲ್ಲಿ ಏನು ಕ್ರಮವನ್ನೂ ತೆಗೆದುಕೊಳ್ಳುವುದಕ್ಕೆ ಅವರು ತಯಾರು ಇಲ್ಲ. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ನೋಡೋಣ, ಮಾಡೋಣ ಎನ್ನುವುದ ರಲ್ಲಿ ಯಾವ ಪ್ರಯೋಜನವೂ ಇಲ್ಲ. ಈ ಬಗ್ಗೆ ಕ್ರಮಕೈಗೊಳ್ಳಬೇಕು. ಅಥವಾ ಈ ಬಗ್ಗೆ ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದರೆ ಅದನ್ನು ಹೇಳಬೇಕು. ಈಗ ಮುಖ್ಯವಾಗಿ ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸಿಪುರ).—ರೂಲ್ ನಂಬರ್ 312 ಪ್ರಕಾರ ಈ ವಿಷಯವನ್ನು ಈ ಸಭೆಯಲ್ಲಿ ಎತ್ತುವುದಕ್ಕೆ ನಾನು ತಮ್ಮ ಅಪ್ಪಣೆಯನ್ನು ಕೇಳಿದ್ದೇನೆ. ಈ ಬಗ್ಗೆ ನನ್ನ ಮಾನ್ಯ ಮಿತ್ರರಾದ ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಒಂದು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿದ್ದಾರೆ ಎಂದು ಕಾಣುತ್ತದೆ. ಆದ್ದರಿಂದ ಅಡ್ಜರ್ನ್‌ಮೆಂಟ್ ಮೋಷನ್ ತೆಗೆದುಕೊಂಡು ಆ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟರೂ ಅದಕ್ಕೆ ನನ್ನ ಆಡ್ಡಿ ಇಲ್ಲ. ಏತಕ್ಕೆಂದರೆ ಅದರಲ್ಲಿ ಹೆಚ್ಚು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ವಾಗುತ್ತದೆ. ನಾವು ಹಲವಾರು ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದರೆ ಆ ಬಗ್ಗೆ ಅವರು ಕ್ರಮತೆಗೆದುಕೊಳ್ಳುವುದಕ್ಕೆ ಅದು ಸಹಕಾರಿಯಾಗಬಹುದು. ಇದು ಬಹಳ ಜರೂರಾದ ವಿಷಯ. ಇದನ್ನು ಮಾನ್ಯ ಮಂತ್ರಿಗಳು ಬಗೆಹರಿಸಬೇಕು. ಖಾಸಗೀ ಶಾಲೆಗಳಲ್ಲಿ ಅವ್ಯವಹಾರಗಳು ನಡೆಯುತ್ತಿವೆ. ಅದನ್ನೆಲ್ಲಾ ತಪ್ಪಿಸಬೇಕು ಆ ದೃಷ್ಟಿಯಿಂದಲೂ ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ನಿರಪರಾಧಿಗಳಾದ ಅನೇಕ ಜನ ಉಪಾಧ್ಯಾಯರಿಗೆ ತೊಂದರೆಯಾಗುತ್ತಿದೆ. ಅದು ಬಹುಶಃ ತಮ್ಮ ಗಮನಕ್ಕೂ ಬಂದಿದೆಯೆಂದು ಕಾಣುತ್ತದೆ. ನ್ಯಾಯವಾಗಿರತಕ್ಕ ಉಪಾಧ್ಯಾಯರಿಗೆ ತೊಂದರೆಯಾಗಿದೆ. ಈಗ ಅವರಿಗೆ ರಕ್ಷಣೆಯನ್ನು ಕೊಡಬೇಕಾಗುತ್ತದೆ. ಇಲಾಖೆಯ ಅಧಿಕಾರಿಗಳೂ ಕೂಡ ಅವರ ಬಗ್ಗೆ ಅಸಡ್ಡೆಯಿಂದ ವರ್ತಿಸಿದ್ದಾರೆಂದು ನಾನು ಕೇಳಿದ್ದೇನೆ. ಕೆಲವು ಶಿಕ್ಷಕರನ್ನು ಹೊರಗೆ ಹಾಕುವುದಕ್ಕೆ ಪೋಲೀಸ್ ಅಧಿಕಾರಿಗಳ ನೆರವನ್ನು ಆ ಖಾಸಗೀ ಶಾಲೆಗಳವರು ಪಡೆದಿದ್ದಾರೆಂದು ಗೊತ್ತಾಗಿದೆ. ಮತ್ತು ಅವರಿಗೆ ಅವಹೇಳನ ಮಾಡತಕ್ಕ ಸಂದರ್ಭಕ್ಕೂ ಅವರು ಕೈಹಾಕಿದ್ದಾರೆಂದು ನನ್ನ ಗಮನಕ್ಕೆ ಬಂದಿದೆ.

ಶ್ರೀ ವಾಟಾಳ್ ನಾಗರಾಜ್.—ಕೆಲವು ಉಪಾಧ್ಯಾಯರ ಮಾನಾಪಹರಣ ಮಾಡಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಖಾಸಗೀ ಶಾಲೆಗಳ ಉಪಾಧ್ಯಾಯರಿಗೆ ಇರತಕ್ಕ ತೊಂದರೆಗಳನ್ನು ಬಗೆಹರಿಸಲು ಯಾವುದಾದರೂ ಒಂದು ಪರಿಹಾರವನ್ನು ಕಂಡುಹಿಡಿಯಬೇಕೆಂದು ಮೇಲ್ಮನೆಯ ಸದಸ್ಯರೂ ಕೂಡ ಹೇಳಿದ್ದಾರೆ. ಅದು ಪತ್ರಿಕೆಗಳಲ್ಲಿ ಬಂದಿದೆ. ಆದ್ದರಿಂದ ಆ ಉಪಾಧ್ಯಾಯರ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರದವರು ಕ್ರಮತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಡುತ್ತಾರೆಂದು ಹೇಳಿದರು. ಸಂತೋಷ. ಇದರ ಬಗ್ಗೆ ಅಂತಿಮವಾಗಿ ಒಂದು ತೀರ್ಮಾನವನ್ನು ಮಾಡಲು ಯಾವುದಾದರೂ ಒಂದು ದಾರಿಯನ್ನು ಕಂಡುಹಿಡಿಯಬೇಕು. ಈ ದೃಷ್ಟಿಯಿಂದ ನಾನು ಇದನ್ನು ಹೇಳುತ್ತಿದ್ದೇನೆ.

1-30 P.M.

ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷಣಿಯವರೆ, ಈ ಸಮಸ್ಯೆ ಹಿಂದೆಯೂ ನಮ್ಮ ಶಾಸನ ಸಭೆಗೆ ಬಂದಿದೆ. ಮೇಲ್ಮನೆಯಲ್ಲಿಯೂ ಇದರ ಬಗ್ಗೆ ಚರ್ಚೆ ನಡೆದಿದೆ. ಅನೇಕ ಮಾನ್ಯ ಸದಸ್ಯರ ಅಭಿಪ್ರಾಯದಲ್ಲಿ ಮತ್ತು ನಮ್ಮ ಸರ್ಕಾರದ ಗಮನಕ್ಕೆ ಬಂದಿರತಕ್ಕ ರೀತಿಯಲ್ಲಿ ಈ ಖಾಸಗೀ ಶಾಲೆಗಳು ಅದರಲ್ಲಿಯೂ ಪ್ರಾಥಮಿಕ ಮತ್ತು ಹೈಸ್ಕೂಲುಗಳು ಕಾನೂನಿಗೆ ವಿರುದ್ಧವಾಗಿ ನಡೆಯುತ್ತಿವೆ, ಮತ್ತು ಸಂಬಳ ಕೊಡುವುದರಲ್ಲಿ ಬಹಳ ಮೋಸ ನಡೆಯುತ್ತಿದೆ ಮತ್ತು ಜನರನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ ಒಂದು ಲಂಗುಲಗಾಮು ಇಲ್ಲದೆ ತೆಗೆದುಕೊಳ್ಳುತ್ತಿದ್ದಾರೆ. ಈ ರೀತಿ ಇವುಗಳ ಬಗ್ಗೆ ಅನೇಕ ದೂರುಗಳು ಬಂದಿವೆ. ಸರ್ಕಾರದವರು ಇಂಥ ಶಾಲೆಗಳ ಬಗ್ಗೆ ಹೆಚ್ಚು ಗಮನ ಕೊಟ್ಟು ಎಲ್ಲಿ ತಪ್ಪು ಮಾಡುತ್ತಾರೆ, ಅವುಗಳ ಬಗ್ಗೆ ವಿಚಾರಣೆ ಮಾಡಬೇಕೆಂದು ಒಬ್ಬ ಅಧಿಕಾರಿಯನ್ನು ಸಹ ನೇಮಕ ಮಾಡಿ ಅದರ ಕಾರ್ಯಕ್ರಮ ಜರಗುತ್ತಿದೆ. ಏತನ್ಮಧ್ಯೆ ಕೆಲವು ಶಾಲೆಗಳನ್ನು ಮುಚ್ಚಿದ್ದಾರೆ. ಹಾಗೆ ಮಾಡಿರತಕ್ಕದ್ದು ಸರ್ಕಾರದ ಕಾನೂನು ಪ್ರಕಾರ. ಅದರ ವಿವರಗಳನ್ನು ಮಾನ್ಯ ವಿದ್ಯಾ ಮಂತ್ರಿಯವರು ಹೇಳುವರು. ಈಗ ಹೀಗೆ ಮುಚ್ಚಿರತಕ್ಕಂತಹ ವಿದ್ಯಾಶಾಲೆಗಳಲ್ಲಿ ಹೆಣ್ಣು ಮಕ್ಕಳು ಮತ್ತು ಗಂಡಸರು ಉಪಾಧ್ಯಾಯರುಗಳಾಗಿದ್ದಾರೆ. ಅವರುಗಳಿಗೆ ಈಗ ಕೆಲಸವಿಲ್ಲದೆ ತೊಂದರೆಯಾಗಿರುವ ವಿಚಾರ ಬಂದಿದೆ. ಅದೂ ಅಲ್ಲದೆ ಈ ಉಪಾಧ್ಯಾಯ ವರ್ಗದಲ್ಲಿ ಎರಡು ವರ್ಗ ಇವೆ. ಕೆಲವರು ಕ್ವಾಲಿಫೈಡ್ ಟೀಚರ್ಸ್ ಇದ್ದಾರೆ, ಇನ್ನು ಕೆಲವರು ಅನ್‌ಕ್ವಾಲಿಫೈಡ್ ಟೀಚರ್ಸ್ ಇದ್ದಾರೆ. ಲೋವರ್ ಸೆಕಂದರಿ ಪಾಸ್ ಆಗಿರುವವರನ್ನು ನೇಮಕ ಮಾಡಿಕೊಂಡು ಬೇರೆಯವರ ಹೆಸರಿನಲ್ಲಿ ಸಂಬಳ ಡ್ರಾ ಮಾಡುತ್ತಿದ್ದ ಕೇಸುಗಳೂ ಇವೆ. ಈಗ ಇವರೆಲ್ಲರನ್ನೂ ಹೇಗೆ ಕೆಲಸಕ್ಕೆ ತೆಗೆದುಕೊಳ್ಳಬೇಕೆನ್ನುವುದರ ಬಗ್ಗೆ ಸಂಬಂಧಪಟ್ಟ ಮಂತ್ರಿಯವರು ನೋಡುತ್ತಾರೆ. ಅದೂ ಅಲ್ಲದೆ ಏತನ್ಮಧ್ಯೆ ನನಗೆ ಈ ವಿಚಾರ

ವನ್ನು ಯಾರೂ ತಂದು ಹೇಳಲಿಲ್ಲ. ನಾನು ತರಬೇಕೆಂದು ಹೇಳುತ್ತಾ ಇಲ್ಲ; ಅವರು ನಂಬಿಂಧ ಹಟ್ಟ ಮಂತ್ರಿಯವರ ಹತ್ತಿರ ಮಾತನಾಡಿರಬಹುದು. ಇದ್ದಕ್ಕಿದ್ದ ಹಾಗೆ ಸತ್ಯಾಗ್ರಹ ಮಾಡುತ್ತಿದ್ದಾರೆ, ಮಂತ್ರಿಗಳು ಬಂದು ನೋಡಬೇಕು ಎಂದು ನನಗೆ ಹೇಳಿದರು. ನಾನು ಹೇಳಿದೆ, ಅವರ ಪರವಾಗಿ ಯಾರಾದರೂ ಬನ್ನಿ, ವಿಚಾರವನ್ನು ತಿಳಿಸಿ—ಎಂದು ಹೇಳಿದೆ. ಇಲ್ಲ, ಇಲ್ಲ, ನೀವು ಬರಲೇಬೇಕೆಂದು ಹೇಳಿದರು. ಆಗ "ದಯವಿಟ್ಟು ಕ್ಷಮಿಸಿ, ನಾನು ಬರುವುದಿಲ್ಲ" ಎಂದು ಹೇಳಿದೆ. ನಿನ್ನೆ ಮೇಲ್ಮನೆಯಲ್ಲಿಯೂ ನಾನು ಇಲ್ಲದಾಗ ಮುಖ್ಯಮಂತ್ರಿಯವರು ಹಾಗೆ ಹೇಳುತ್ತಾರೆ, ಹೀಗೆ ಹೇಳುತ್ತಾರೆ ಎಂದು ಹೇಳಿದ್ದಾರೆಂದು ನಾನು ಕೇಳಿದೆ. ಈಗ ಇದನ್ನು ನೀವು ನೋಡದಿದ್ದರೆ ಪರಿಸ್ಥಿತಿ ಉಲ್ಬಣಾವಸ್ಥೆಗೆ ಹೋಗುತ್ತದೆಂದು ಹೇಳುತ್ತಿದ್ದಾರೆ. ಇವತ್ತು ದೇಶದಲ್ಲಿ ಬಿ.ಎ., ಎಂ.ಎ. ಹಾಗೂ ಇನ್ನಿತರ ಡಿಗ್ರಿ ಮಾಡಿಕೊಂಡವರು ಕೆಲಸ ಇಲ್ಲದೆ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಸರ್ಕಾರದವರು ಮಾಡಿದ ತಪ್ಪಿಗೆ ಅವರನ್ನು ಏಕೆ ಬೈಯುತ್ತಿದ್ದೀರಿ ? ನೀವೇ ಅದಕ್ಕೆ ಸರಿಯಾದ ವ್ಯವಸ್ಥೆಯನ್ನು ಮಾಡಿಲ್ಲ.

Sri D. DEVARAJ URS.—Our sympathies are with all those who are unemployed and more so with those who are educated and qualified. Let there not be misplaced sympathy for these people.

Sri M. S. KRISHNAN.—We are not having any misplaced sympathy, as the Hon. Chief Minister stated. Our sympathies naturally go to those teachers who have been rendered unemployed due probably to certain malpractices indulged in by some private-aided managements and the situation is aggravated by the non-implementation of certain policies enunciated by the Government. For instance, when the present took over power, at that time the D. P. I. and others said that they were going to see that those malpractices are going to be removed and they did try to take action. Because of that certain schools are closed and some teachers are unemployed. The most important question is, what does the Government propose to do for them? It is not a question of unemployed people getting employed. These were employed persons having become unemployed. That is why our sympathies go to them; it is not misplaced.

Sri D. DEVARAJ URS.—I do not want to mix up issues and club these people with the large number of other people who are unemployed. What I am saying is that among these teachers there are some who are not at all qualified. It is not as if a set of people who are properly qualified and employed have all been unemployed. Nevertheless, Government sympathises with them. I do not say that Government wants to neglect them or be indifferent to them. The Minister concerned has been looking into this question. If any hon. Member or hon. Members on their behalf say that they are not satisfied, that is a different matter. To be frank, nobody has brought this question before me so far. I wish to submit to you, Madam, that I am not well conversant with this problem. If any hon. Members who are conversant with this problem want to see me, I would welcome them. I shall fix up some time; let them come and discuss with me; we will do what is best under the circumstances. Instead of that, to say that myself or the Education Minister should go and stand before these satyagrahis is something to which I cannot agree. Whoever asked them to perform satyagraha in this *jadi male*? If they do it,

(SRI D. DEVARAJ URS)

how can I help them? Have I at any time prevented anybody on their behalf like Sri Vatal Nagaraj to come to me and state their problems? We are prepared to meet them at any time and try to solve the problem to the best of our ability. But if any of their leaders wants to force the issue and seek a solution according to their thinking, I am afraid it is not possible.

ಶ್ರೀ ವಾಟಾಳ್ ನಾಗರಾಜ್.—ಈಗ ಖಾನಗೀ ಶಾಲೆಗಳವರು.....

ಅಧ್ಯಕ್ಷರು.—ಮುಖ್ಯಮಂತ್ರಿಯವರು ಬಂದು ಮಾತನಾಡಿ ಎಂದು ಹೇಳಿದ್ದಾರೆ. ಆದ್ದರಿಂದ ಇನ್ನು ಹೆಚ್ಚು ಅದರ ಬಗ್ಗೆ ಮಾತನಾಡುವುದು ಬೇಡ. Under the Circumstances, I withhold my Consent.

ಶ್ರೀ ಡಿ. ದೇವರಾಜ ಅರಸ್.—ತಾವು ಇವತ್ತು ಇಲ್ಲಿ ಒತ್ತಾಯ ಮಾಡಿ ಖಾನಗೀ ಶಾಲೆಗಳಲ್ಲಿ ಬಹಳ ಮೋಸ ನಡೆಯುತ್ತಿದೆ; ಸಂಬಳ ಕೊಡುವುದರಲ್ಲಿ ಬಹಳ ಮೋಸ ಇದೆ, ಮತ್ತು ಇತರ ಅನೇಕ ನ್ಯೂನತೆಗಳು ಇವೆ ಎಂದು ಇತ್ಯಾದಿ ಹೇಳಿದ್ದೀರಿ. ಹಾಗೆ ಕೆಲವು ಶಾಲೆಗಳನ್ನು ದುರುದ್ದೇಶದಿಂದ ಮುಚ್ಚಿಲ್ಲ. ನಾವು ತಮ್ಮೆಲ್ಲರ ಅಭಿಪ್ರಾಯ ಹೀಗೆ ಇದೆಯೆಂದು ಸರ್ಕಾರದವರು ಕೆಲವು ಕಾರ್ಯ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಆದ್ದರಿಂದ ಸರ್ಕಾರದವರು ಕಣ್ಣು ಮುಚ್ಚಿಕೊಂಡು ಹೋಗುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ತಾವು ಈ ಸಮಸ್ಯೆಯ ಬಗ್ಗೆ ಏನು ಸಲಹೆಗಳನ್ನು ಕೊಡುತ್ತೀರಿ ಅವುಗಳನ್ನು ಗಮನದಲ್ಲಿಟ್ಟುಕೊಂಡು ಈ ಸಮಸ್ಯೆಯನ್ನು ಹೇಗೆ ಬಗೆಹರಿಸುವುದಕ್ಕೆ ಸಾಧ್ಯವಿದೆ ಆ ರೀತಿ ಮಾಡುತ್ತೇವೆ. ಈ ಸಂದರ್ಭದಲ್ಲಿ ಎಲ್ಲರನ್ನೂ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೇ, ಮತ್ತು ಅದಕ್ಕೆ ಕಾನೂನಿನ ಅಡಚಣೆಗಳು ಏನಾದರೂ ಇದೆಯೇ ಎಂಬುದನ್ನು ನೋಡಿಕೊಂಡು ಮಾಡಬೇಕಾಗುತ್ತದೆ.

Seats for P. U. C. Students at Kolar

ಶ್ರೀ ಸಿ. ಬೈರೇಗೌಡ (ವೇಮಗಲ್).—ನಾನು ಈ ಸಭೆಯ ಮೂಲಕ ವಿದ್ಯಾಮಂತ್ರಿಗಳನ್ನು ಪ್ರಾರ್ಥಿಸುತ್ತೇನೆ. ಕೋಲಾರದಲ್ಲಿ 475 ಜನ ಫಸ್ಟ್ ಇಯರ್ ಪಿ. ಯು. ಸಿ. ವಿದ್ಯಾರ್ಥಿಗಳಿಗೆ ಕಾಲೇಜಿನಲ್ಲಿ ಪ್ರವೇಶಾವಕಾಶ ಕೊಡಬೇಕು. ಅದರ ಪ್ರಕಾರ ನಿನ್ನೆ ಮಾನ್ಯ ಕೋಲಜಿಯೇಟ್ ಎಜುಕೇಷನ್ ಡೈರೆಕ್ಟರ್ ಅವರೂ ಸಹ ಕೋಲಾರಕ್ಕೆ ಹೋಗಿದ್ದರು. ಇವತ್ತು ಅದರ ಬಗ್ಗೆ ಪತ್ರಿಕೆಯಲ್ಲಿ ವರದಿಯಾಗಿರುವುದಾಗಿದೆ. ಈಗಾಗಲೇ ಆ 475 ಜನಗಳಿಗೆ ಅಲ್ಲಿ ಅವಕಾಶ ಕಲ್ಪಿಸಿಲ್ಲ. ಅಲ್ಲಿಯೂ ಒಂದು ಜೂನಿಯರ್ ಕಾಲೇಜ್ ತೆರೆಯಬೇಕೆಂದು ಶಿಫಾರಸು ಮಾಡಿದ್ದಾರೆ.

ಅಧ್ಯಕ್ಷರು.—ಕಾರ್ ಅಟೆನ್‌ಷನ್ ನೋಟೀಸ್ ಅದರ ಬಗ್ಗೆ ಮಾನ್ಯ ಸದಸ್ಯರು ಕೊಟ್ಟಿದ್ದಾರೆ.

ಶ್ರೀ ಸಿ. ಬೈರೇಗೌಡ.—ನಾನು ಅದನ್ನು 3—4 ದಿವಸಗಳ ಹಿಂದೆ ಕೊಟ್ಟಿದ್ದೇನೆ. ಅದರಲ್ಲಿ ಒಂದು ತಪ್ಪು ಅಭಿಪ್ರಾಯವಿದೆ. ಅದನ್ನು ಮಾತ್ರ ಹೇಳಬೇಕೆಂದಿದ್ದೇನೆ.

Notice of a Question of Privilege

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ನಾನು ಒಂದು ಪ್ರಿವಿಲೇಜ್ ಮೋಷನ್ ಕಳುಹಿಸಿದ್ದೆ. ಮಾನ್ಯ ಮೇಯರ್ ಬಗ್ಗೆ ಉತ್ತರ ಇವತ್ತೋ ಅಥವಾ ನಾಳೆಯೋ ಹೇಳುತ್ತಿದ್ದಾರೆ.

ಅಧ್ಯಕ್ಷರು.—ಟೇಪ್ ರಿಕಾರ್ಡರ್ ಬಂದಿದೆ. ಕಮಿಷನರ್ ಊರಲ್ಲಿಲ್ಲ. ಮಂತ್ರಿಗಳು ಇಲ್ಲಿಗೆ ಬಂದಮೇಲೆ ಆ ವಿಷಯವನ್ನು ವಿಚಾರಮಾಡುತ್ತೇನೆ.